ತುಂಡು ಕೃಷಿ ಭೂಮಿ ಮಾರಾಟಕ್ಕಿಲ್ಲ ತಡೆ

ಒತ್ತಡಕ್ಕೆ ಮಣಿದು ಆದೇಶ ಪರಿಷ್ಕರಿಸಿದ ಸರಕಾರ

ವಿಕ ಸುದ್ದಿಲೋಕ ಮಂಗಳೂರು

ಕೃಷಿ ಭೂಮಿ ಮಾರಾಟ ಮಾಡಲು ರಾಜ್ಯ ಸರಕಾರವು ಕನಿಷ್ಠ ವಿಸ್ತೀರ್ಣದ ಮಿತಿ ಹೇರಿ ಈ ಹಿಂದೆ ಹೊರಡಿಸಿದ್ದ ಆದೇಶಕ್ಕೆ ರಾಜ್ಯಾದ್ಯಂತ ಭಾರಿ ವಿರೋಧ ವ್ಯಕ್ತವಾಗಿತ್ತು. ಈ ಹಿನ್ನೆಲೆಯಲ್ಲಿ ರಾಜ್ಯದ ಭೂ ಮಾಪನಾ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ ಸ್ಪಷ್ಟೀಕರಣದ ಸುತ್ತೋಲೆ ಹೊರಡಿಸಿದೆ.

ವಿಜಯ IMPACT ಕರ್ನಾಟಕ

ಹೊಸ ಆದೇಶದ ಪ್ರಕಾರ ಅಸ್ತಿತ್ವದಲ್ಲಿರುವ ಕೃಷಿ ಭೂಮಿ ವಿಸ್ತೀರ್ಣ ಎಷ್ಟೇ ಇದ್ದರೂ ಅದರಲ್ಲಿನ ಭಾಗಶಃ ಅಥವಾ ಸಂಪೂರ್ಣ ವಿಸ್ತೀರ್ಣವನ್ನು ಯಾವುದೇ ನಿರ್ಬಂಧ ಇಲ್ಲದೆ ಭೂ ಪರಿವರ್ತನೆ ಮಾಡಬಹುದಾಗಿದೆ. ಈ ರೀತಿಯಾಗಿ ಭಾಗಶಃ ವಿಸ್ತೀರ್ಣ ಭೂ ಪರಿವರ್ತನೆಯಾದ ಬಳಿಕ ಉಳಿದಿರುವ ಭೂಮಿ ಉಲ್ಲೇಖಿತ ಆದೇಶದಲ್ಲಿ ನಮೂದಿಸಿರುವ ವಿಸ್ತೀರ್ಣಕ್ಕಿಂತ ಕಡಿಮೆ ಇದ್ದರೂ ಉಳಿದ ವಿಸ್ತೀರ್ಣಕ್ಕೆ ಕೃಷಿ ಭೂಮಿಯಾಗಿ ಪಹಣಿ ಮುಂದುವರಿಯುತ್ತದೆ. ಬಳಿಕ ಉಳಿದಿರುವ ಕೃಷಿ ಭೂಮಿ ಎಷ್ಟೇ ವಿಸ್ತೀರ್ಣವಾಗಿದ್ದರೂ ಕೂಡ ಮತ್ತೆ ಭಾಗಶಃ ಅಥವಾ ಪೂರ್ಣ ಭೂಮಿಯನ್ನು ಪರಿವರ್ತನೆ ಮಾಡಬಹುದಾಗಿದೆ.

ಹೊಸ ಆದೇಶಕ್ಕೆ ಅನುಗುಣವಾಗಿ ಮೋಜಿಣಿ ತಂತ್ರಾಂಶದಲ್ಲಿ ಸೂಕ್ತ ಅವಕಾಶ ನೀಡಲಾಗಿದೆ ಹಾಗೂ ಭೂ ಪರಿವರ್ತನೆಗೆ ಸ್ಕೆಚ್ ಮಾಡಬಹುದಾಗಿದೆ. ಅಲ್ಲದೆ ಕೃಷಿ ಭೂಮಿ ಮಾರಾಟಕ್ಕೆ 11ಇ ಸ್ಕೆಚ್‌ಗಾಗಿ ಪಡೆದಿರುವ ಅರ್ಜಿಗಳನ್ನು ಅವು 3 ಅಥವಾ 5 ಗುಂಟೆಗಿಂತ ಕಡಿಮೆ ಇದ್ದರೂ ಅರ್ಹತೆಗೆ ಅನುಗುಣವಾಗಿ 11ಇ ಸ್ಕೆಚ್‌ನ್ನು ನೀಡಬಹುದು. ಹೊಸ ಪಹಣಿ ರಚಿಸಬಹುದು ಎಂದು ಭೂ ಮಾಪನಾ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ ಆಯುಕ್ತ ಮುನೀಶ್ ಮೌದ್ಗಿಲ್ ನೀಡಿರುವ ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಏನಾಗಿತ್ತು ಸಮಸ್ಯೆ? ಡಿ.7ರಂದು ಹೊರಡಿಸಿದ್ದ ಆದೇಶದ ಪ್ರಕಾರ ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ ಹಾಗೂ ಕೊಡಗು ಜಿಲ್ಲೆಗಳಲ್ಲಿ ಮೂರು ಗುಂಟೆ(ಏಳೂವರೆ ಸೆಂಟ್ಸ್) ಹಾಗೂ ಉಳಿದ ಜಿಲ್ಲೆಗಳಿಗೆ ಕನಿಷ್ಠ 5 ಗುಂಟೆ(12.50 ಸೆಂಟ್ಸ್) ಜಮೀನಿಗಿಂತ ಕಡಿಮೆ ಜಮೀನನ್ನು ಮಾರಾಟ ಮಾಡುವಂತಿಲ್ಲ ಎಂದು ಆದೇಶಿಸಲಾಗಿತ್ತು. ಈ ನಿಯಮದಿಂದ ಸಣ್ಣ ರೈತರಿಗೆ ಅನ್ಯಾಯವಾಗುತ್ತಿದ್ದು, ಈ ಬಗ್ಗೆ ವಿಜಯ ಕರ್ನಾಟಕ ಡಿ.19ರಂದು ವಿಶೇಷ ವರದಿ ಮೂಲಕ ಸರಕಾರವನ್ನು ಎಚ್ಚರಿಸಿತ್ತು.

01-01-2022 Vk Pg 06

01-01-2022 Vsv Pg 10

ಶೀಘ್ರದಲ್ಲೇ ಹಲವು ಗೋಶಾಲೆಗಳ ಆರಂಭ | ಇಲಾಖೆಯಲ್ಲಿ 458 ಪಶುವೈದ್ಯ ಹುದ್ದೆ ಭರ್ತಿ

ರಾಜ್ಯದಲ್ಲಿ ಗೋ ಆಧಾರಿತ ಕೃಷಿಗೆ ಕ್ರಮ

ಬೆಂಗಳೂರು: ರಾಜ್ಯದ ಗೋಶಾಲೆಗಳಲ್ಲಿ ಗೋ ಆಧಾರಿತ ಕೃಷಿ, ಗೊಬ್ಬರ ತಯಾರಿಕೆ ಮತ್ತು ಬಯೋಗ್ಯಾಸ್ ಉತ್ಪಾದನೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಪಶು ಸಂಗೋಪನಾ ಸಚಿವ ಪ್ರಭು ಚವ್ಹಾಣ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದ ಕೆಲವು ಗೋಶಾಲೆಗಳನ್ನು ಪ್ರಾಯೋಗಿಕವಾಗಿ ಆಯ್ಕೆ ಮಾಡಿಕೊಂಡು ಈ ಯೋಜನೆ ಜಾರಿಗೆ ತರುವ ಸಾಧ್ಯಾಸಾಧ್ಯತೆಗಳ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ ಎಂದರು.

ಕೇಂದ್ರ ಸರಕಾರದ ಗೋರ್ಬಧನ್ ಯೋಜನೆಯಡಿ ಈ ಪ್ರಯೋಗ ನಡೆಸಲಾಗುವುದು. ಗೋಶಾಲೆಗಳಲ್ಲಿ ಗೋ ಉತ್ಪನ್ನಗಳ ತಯಾರಿಕೆ, ಗೊಬ್ಬರ ತಯಾರಿಕೆ ಮತ್ತು ಬಯೋಗ್ಯಾಸ್ ತಯಾರಿಕೆ ಮಾಡಲಾಗುವುದು. ಇವುಗಳ ನಿರ್ವಹಣಾ ವೆಚ್ಚ, ಮಾರುಕಟ್ಟೆ ಎಲ್ಲವನ್ನೂ ಗಮನಿಸಿ ಮುಂದಿನ ದಿನಗಳಲ್ಲಿ ಎಲ್ಲ ಗೋಶಾಲೆಗಳಿಗೆ ವಿಸ್ತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಗುಜರಾತ್, ಮಹಾರಾಷ್ಟ್ರ ಮತ್ತು ಉತ್ತರಪ್ರದೇಶ ರಾಜ್ಯಗಳಲ್ಲಿ ತಾವು ಕೈಗೊಂಡ ಪ್ರವಾಸ ಕುರಿತು ಮಾಹಿತಿ ನೀಡಿದ ಸಚಿವರು, ಕರ್ನಾಟಕದಲ್ಲಿ ಗೋಶಾಲೆಗಳ ನಿರ್ವಹಣೆ ಹಾಗೂ ಬೇರೆ ರಾಜ್ಯಗಳಲ್ಲಿ ಗೋಶಾಲೆಗಳ ನಿರ್ವಹಣೆ ಕುರಿತು ಅಧ್ಯಯನ ನಡೆಸಿದ್ದು, ಇವುಗಳನ್ನು ಆತ್ಮ ನಿರ್ಭರ ಭಾರತದಡಿ ನಿರ್ವಹಣೆ ಮಾಡಲು ಈ ರಾಜ್ಯಗಳು ಅತ್ಯುತ್ತಮ ಕಾರ್ಯಕ್ರಮ ರೂಪಿಸಿವೆ. ಗೋವಿನ ಸಗಣಿ, ಗೋಮೂತ್ರದಿಂದ ನೂರಕ್ಕೂ ಹೆಚ್ಚು ಉತ್ಪನ್ನಗಳನ್ನು ತಯಾರಿಸಿ ಗೋಶಾಲೆಗಳನ್ನು ಸ್ವಾವಲಂಬಿಯಾಗಿ ಸರಕಾರದ ಅನುದಾನ ಇಲ್ಲದೆ ನಡೆಯುವಂತೆ ಮಾಡಲಾಗಿದೆ. ಇದನ್ನೇ ರಾಜ್ಯದಲ್ಲೂ ಅಳವಡಿಸುವ ಉದ್ದೇಶವಿದೆ ಎಂದು ಹೇಳಿದರು.

ರಾಜ್ಯದಲ್ಲಿ ಗೋಹತ್ಯೆ ನಿಷೇಧ ಕಾಯಿದೆ ಅನುಷ್ಠಾನಗೊಂಡ ನಂತರ ಬಜೆಟ್‌ನಲ್ಲಿ ಜಿಲ್ಲೆಗೊಂದು ಗೋಶಾಲೆ ಘೋಷಣೆ ಮಾಡಲಾಗಿತ್ತು. ಅದರಂತೆ ರಾಜ್ಯದಲ್ಲಿ ಗೋಶಾಲೆಗಳಿಗೆ ಸ್ಥಳ ಗುರುತಿಸುವ ಕಾರ್ಯ ನಡೆಯುತ್ತಿದೆ. ಶೀಘ್ರದಲ್ಲೇ ಕೆಲವು ಗೋಶಾಲೆಗಳನ್ನು ಲೋಕಾರ್ಪಣೆ ಮಾಡಲಾಗುವುದು ಎಂದು ತಿಳಿಸಿದರು.

458 ಪಶುವೈದ್ಯರ ನೇಮಕ

ಸತತ ಪ್ರಯತ್ನದ ಫಲವಾಗಿ 458 ಪಶುವೈದ್ಯರ ನೇಮಕಕ್ಕೆ ಅನುಮೋದನೆ ದೊರೆತಿದೆ. ಅದರಲ್ಲಿ 58 ಬ್ಯಾಕ್‌ಲಾಗ್ ಹುದ್ದೆಗಳಿವೆ. ಪಶುಸಂಗೋಪನೆ ಇಲಾಖೆಗೆ 900 ಹುದ್ದೆಗಳ ನೇಮಕಕ್ಕೆ ಮನವಿ ಮಾಡಲಾಗಿತ್ತು. ಸದ್ಯ 458 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆ ಅನುಮತಿ ನೀಡಿದ್ದು, ಇದರಿಂದ ಸಾಕಷ್ಟು ಸಮಸ್ಯೆಗಳು ಬಗೆಹರಿಯಲಿವೆ ಎಂದು ಸಚಿವ ಪ್ರಭು ಚವ್ಹಾಣ್ ಹೇಳಿದರು.

ಹಿಂದಿನ ಯಾವುದೇ ಸರಕಾರಗಳು ಗೋವುಗಳ ಸಂರಕ್ಷಣೆ ಬಗ್ಗೆ ಒತ್ತು ನೀಡಿರಲಿಲ್ಲ. ರಾಜ್ಯದಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದ ನಂತರ ಗೋ ಸಂರಕ್ಷಣೆ, ಗೋಹತ್ಯೆ ನಿಷೇಧ ಕಾಯ್ದೆ ಅನುಷ್ಠಾನಕ್ಕೆ ತಂದು ಗೋ ಸಂರಕ್ಷಣೆಯನ್ನು ವ್ಯವಸ್ಥಿತವಾಗಿ ಮಾಡಲಾಗುತ್ತಿದೆ.

-ಪ್ರಭು ಚವ್ಹಾಣ್
ಪಶು ಸಂಗೋಪನಾ ಸಚಿವ

ಸರಕಾರವನ್ನು ಅವಲಂಬಿಸದೆ ಗೋಶಾಲೆಗಳ ನಿರ್ವಹಣೆಗೆ ಆದಾಯ ಸೃಷ್ಟಿಸಲು ನಿರ್ಧಾರ

ಗೋ ಉತ್ಪನ್ನ ತಯಾರಿಕೆಗೆ ಹೊರ ರಾಜ್ಯದ ಮಾದರಿ

ಬೆಂಗಳೂರು: ಕಸಾಯಿ ಖಾನೆಗೆ ಸಾಗಿಸುತ್ತಿದ್ದ ಗೋವುಗಳ ರಕ್ಷಣೆಯೊಂದೇ ಗೋ ಹತ್ಯೆ ನಿಷೇಧ ಕಾಯಿದೆ ಉದ್ದೇಶವಾಗದೆ ಗೋಶಾಲೆಯಲ್ಲಿ ರಕ್ಷಿಸಿದ ಗೋವುಗಳ ಪಾಲನೆ, ಅಲ್ಲಿ ಸಂಗ್ರಹಿಸಿದ ಸಗಣಿ, ಗೋಮೂತ್ರಗಳಿಂದ ಉತ್ಪನ್ನ ತಯಾರಿಕೆಯ ಮೂಲಕ ಆದಾಯ ಬರುವಂತೆ ಹೊರ ರಾಜ್ಯಗಳಲ್ಲಿ ಮಾಡಲಾಗಿದೆ ಎಂದು ಪಶುಸಂಗೋಪನೆ ಸಚಿವ ಪ್ರಭು ಚವ್ಹಾಣ್ ತಿಳಿಸಿದರು.

ಗುಜರಾತ್, ಮಹಾರಾಷ್ಟ್ರ ಹಾಗೂ ಉತ್ತರ ಪ್ರದೇಶ ರಾಜ್ಯಗಳ ಗೋಶಾಲೆಗಳ ಅಧ್ಯಯನ ನಡೆಸಿ ವಾಪಸಾದ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ''ಈ ರಾಜ್ಯಗಳಲ್ಲಿ ಗೋಮೂತ್ರದಿಂದ ಸುಮಾರು ನೂರಕ್ಕೂ ಹೆಚ್ಚು ಉತ್ಪನ್ನಗಳನ್ನು ತಯಾರಿಸುತ್ತಿದ್ದಾರೆ. ಗೋಶಾಲೆಗಳನ್ನು ಸ್ವಾವಲಂಬಿಯಾಗಿ ಸರಕಾರದ ಅನುದಾನ ಇಲ್ಲದೆ ನಡೆಯುವಂತೆ ಮಾಡುತ್ತಿರುವುದು ಶ್ಲಾಘನೀಯ,'' ಎಂದು ವಿವರಿಸಿದ್ದಾರೆ.

''ಗೋ ಆಧಾರಿತ ಕೃಷಿ, ಗೋ ಶಾಲೆಗಳ ನಿರ್ವಹಣೆ, ಗೋ ಉತ್ಪನ್ನಗಳ ತಯಾರಿಕೆ, ಬಯೋಗ್ಯಾಸ್ ತಯಾರಿಕೆ ಅಂತಹ ವಿಶಿಷ್ಟ ಕಾರ್ಯಗಳನ್ನು ಗೋಶಾಲೆಯಲ್ಲಿ ನಡೆಸಲಾಗುತ್ತಿದೆ. ಹಿಂದಿನ ಯಾವುದೇ ಸರಕಾರಗಳು ಗೋವುಗಳ ಸಂರಕ್ಷಣೆ ಬಗ್ಗೆ ಒತ್ತು ನೀಡಿರಲಿಲ್ಲ. ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಗೋಸಂರಕ್ಷಣೆ ಗೋ ಹತ್ಯೆ ನಿಷೇಧ ಕಾಯಿದೆ ಅನುಷ್ಠಾನಕ್ಕೆ ತಂದಿದೆ. ಇನ್ನು ಗೋ ಸಂರಕ್ಷಣೆಯನ್ನು ವ್ಯವಸ್ಥಿತವಾಗಿ ಮಾಡಬೇಕಿದೆ,'' ಎಂದು ಸಚಿವರು ತಿಳಿಸಿದರು.

ಗುಜರಾತ್ ರಾಜ್ಯದ ಗಾಂಧಿನಗರದಲ್ಲಿ ಬಂಜಾರ ಸಮಾಜದ ಸನ್ಮಾನ ಸ್ವೀಕರಿಸಿದ ಸಚಿವ ಪ್ರಭು ಚವ್ಹಾಣ್

''ಕೇಂದ್ರ ಸರಕಾದ ಗೋಬರ್ ಧನ್ ಯೋಜನೆ ಅಡಿ ರಾಜ್ಯದ ಕೆಲವು ಗೋಶಾಲೆಗಳನ್ನು ಪ್ರಾಯೋಗಿಕವಾಗಿ ಆಯ್ಕೆಮಾಡಿ ಪ್ರಾಯೋಗಿಕವಾಗಿ ಮೂರು ರಾಜ್ಯಗಳಲ್ಲಿ ನಡೆಸಿದ ಮಾದರಿಗಳನ್ನು ಅಳವಡಿಸಕೊಳ್ಳುವುದಕ್ಕೆ ನಿರ್ಧರಿಸಲಾಗಿದೆ,'' ಎಂದು ಅವರು ಹೇಳಿದರು.

''ಗೋಶಾಲೆಯಲ್ಲಿ ಗೋ ಉತ್ಪನ್ನಗಳ ತಯಾರಿಕೆ, ಗೊಬ್ಬರ ತಯಾರಿಕೆ ಮತ್ತು ಬಯೋಗ್ಯಾಸ್ ತಯಾರಿಕೆಗೆ ಮಾಡಲಾಗುವುದು. ಇವುಗಳ ನಿರ್ವಹಣಾ ವೆಚ್ಚ, ಮಾರುಕಟ್ಟೆ ಎಲ್ಲವನ್ನೂ ಗಮನಿಸಿ ಎಲ್ಲ ಗೋಶಾಲೆಗಳಿಗೆ ವಿಸ್ತರಣೆ ಮಾಡಲು ಕ್ರಮ ಕೈಗೊಳ್ಳಲಾಗುವುದು,''ಎಂದು ಸಚಿವರು ತಿಳಿಸಿದ್ದಾರೆ.

ಜಿಲ್ಲೆಗೊಂದು ಗೋಶಾಲೆ

''ಕರ್ನಾಟಕದಲ್ಲಿ ಗೋಹತ್ಯೆ ನಿಷೇಧ ಕಾಯಿದೆ ಅನುಷ್ಠಾನಗೊಂಡ ನಂತರ ಬಜೆಟ್‌ನಲ್ಲಿ ಜಿಲ್ಲೆಗೊಂದು ಗೋಶಾಲೆ ಘೋಷಣೆ ಮಾಡಲಾಗಿತ್ತು. ಈಗ ಗೋಶಾಲೆಗಳಿಗೆ ಸ್ಥಳ ಗುರುತಿಸುವ ಕಾರ್ಯ ಭರದಿಂದ ಸಾಗಿದೆ. ಶೀಘ್ರದಲ್ಲೇ ಕೆಲವು ಗೋಶಾಲೆಗಳನ್ನು ಲೋಕಾರ್ಪಣೆ ಮಾಡಲಾಗುವುದು,'' ಎಂದರು.

''ರಾಜ್ಯದಲ್ಲಿ ಜಾರಿಗೆ ತಂದಿರುವ ಪಶುಕಲ್ಯಾಣ ಸಹಾಯವಾಣಿ, ಜಿಲ್ಲೆಗೊಂದು ಗೋಶಾಲೆ ಯೋಜನೆಗಳನ್ನು ಗುಜರಾತ್ ರಾಜ್ಯದಲ್ಲಿಯೂ ಅನುಷ್ಠಾನ ಮಾಡುವಾದಾಗಿ ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಹೇಳಿದ್ದಾರೆ. ಇದೇ ಸಂದರ್ಭದಲ್ಲಿ ರಾಜಕೋಟ್‌ನಲ್ಲಿ ಮಾಜಿ ರಾಜ್ಯಪಾಲ ವಜುಭಾಯಿ ವಾಲಾ, ಗಾಂಧೀನಗರದಲ್ಲಿ ರಾಜ್ಯಪಾಲ ಆಚಾರ್ಯ ದೇವರತ್ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಲಾಗಿದೆ,'' ಎಂದು ತಿಳಿಸಿದರು.

ನೇಮಕಾತಿಗೆ ಅನುಮತಿ

''ಸತತ ಪ್ರಯತ್ನದ ಫಲವಾಗಿ 458 ಪಶುವೈದ್ಯರ ನೇಮಕಕ್ಕೆ ಅನುಮೋದನೆ ದೊರೆತಿದೆ. ಅದರಲ್ಲಿ 58 ಬ್ಯಾಕ್ ಲಾಗ್ ಹುದ್ದೆಗಳಿವೆ. ಪಶುಸಂಗೋಪನೆ ಇಲಾಖೆಗೆ 900 ಹುದ್ದೆಗಳ ನೇಮಕಾತಿಗೆ ಮನವಿ ಮಾಡಲಾಗಿತ್ತು ,'' ಎಂದು ಸಚಿವರು ಹೇಳಿದ್ದಾರೆ.

01-01-2022 Vk Pg 02

ರಾಗಿ, ಭತ್ತ, ಜೋಳ ಖರೀದಿ ಇಂದಿನಿಂದ

ಬೆಂಗಳೂರು: ರೈತರಿಂದ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರಾಗಿ, ಭತ್ತ ಮತ್ತು ಜೋಳ ಖರೀದಿಗೆ ರಾಜ್ಯ ಸರಕಾರ ರಾಜ್ಯಾದ್ಯಂತ ಖರೀದಿ ಕೇಂದ್ರಗಳನ್ನು ಆರಭಿಸಿದ್ದು, ಜ.1ರಿಂದ ಮಾ.31ರವರೆಗೆ ಈ ಖರೀದಿ ಕೇಂದ್ರಗಳು ಕಾರ್ಯನಿರ್ವಹಿಸಲಿವೆ.

ಪ್ರತಿ ಕ್ವಿಂಟಾಲ್ ಬಿಳಿ ಜೋಳ ಮಾಲ್ದಂಡಿಗೆ 2758 ರೂ., ಬಿಳಿ ಜೋಳ ಹೈಬ್ರೀಡ್‌ಗೆ 2738 ರೂ., ಗ್ರೇಡ್ ಎ ಭತ್ತಕ್ಕೆ 1960 ರೂ., ಕ್ವಿಂಟಾಲ್ ಸಾಮಾನ್ಯ ಗ್ರೇಡ್ ಭತ್ತಕ್ಕೆ 1940 ರೂ., ಕ್ವಿಂಟಾಲ್ ರಾಗಿಗೆ 3377 ರೂ. ದರ ನಿಗದಿ ಪಡಿಸಲಾಗಿದೆ. ಖರೀದಿ ಕೇಂದ್ರಗಳಿಗೆ ಮಿತಿ ಹೇರಿರುವ ಸರಕಾರ, ಪ್ರತಿ ಎಕರೆಗೆ 25 ಕ್ವಿಂಟಾಲ್ ಭತ್ತ, ಪ್ರತಿ ರೈತನಿಂದ 40 ಕ್ವಿಂಟಾಲ್ ಗರಿಷ್ಠ ಭತ್ತ ಖರೀದಿ ಮಿತಿ ನಿಗದಿಗೊಳಿಸಲಾಗಿದೆ. ಅದರಂತೆ ರಾಗಿ ಮತ್ತು ಬಿಳಿಜೋಳಕ್ಕೂ ಮಿತಿ ನಿಗದಿಪಡಿಸಲಾಗಿದ್ದು, ಪ್ರತಿ ಎಕರೆಗೆ ಕ್ರಮವಾಗಿ 10 ಕ್ವಿಂಟಾಲ್, ಪ್ರತಿ ರೈತನಿಂದ ತಲಾ 20 ಕ್ವಿಂಟಾಲ್ ರಾಗಿ, ಬಿಳಿ ಜೋಳ ಖರೀದಿ ಮಿತಿಗೊಳಿಸಲಾಗಿದೆ ಎಂದು ಸಚಿವ ಉಮೇಶ್ ಕತ್ತಿ ತಿಳಿಸಿದ್ದಾರೆ. ಈ ನಡುವೆ, ರೈತರಿಗೆ ಬೆಂಬಲ ಬೆಲೆ ಯೋಜನೆಯ ಲಾಭ ಸಿಗುವಂತೆ ಅಧಿಕಾರಿಗಳು ಕಾರ್ಯೋನ್ಮುಖವಾಗುವಂತೆ ಸಚಿವ ಉಮೇಶ್ ಕತ್ತಿ ಅಧಿಕಾರಿಗಳಿಗೆ ಸೂಚಿಸಿದರು.

01-01-2022 Vk Pg 01

ವಿದ್ಯಾವಂತರೇ ಕೃಷಿಗೆ ಬನ್ನಿ



| ಯಂಕಣ್ಣ ಯರಾಶಿ
ಪ್ರಗತಿಪರ ಕೃಷಿಕ, ಕೊಪ್ಪಳ

ಕೃಷಿ ಎಂಬುದು ಶಾಶ್ವತ ಉದ್ಯೋಗ. ಕರೊನಾ ಬಂದ ಮೇಲೆ ಅನೇಕರಿಗೆ ಇದರ ಅರಿವಾಗಿದೆ. ಯುವಕರು, ವಿದ್ಯಾವಂತರು ಹೆಚ್ಚಾಗಿ ಇತ್ತ ವಾಲಬೇಕು. ತೋಟಗಾರಿಕೆ ಬೆಳೆಗಳಿಂದ ಆರಂಭದಲ್ಲಿ ಲಾಭ ಬರುವುದಿಲ್ಲ. ಆದರೆ, ನಿರಂತರ ಆದಾಯ ಬರುತ್ತದೆ. ಸಣ್ಣ ಪುಟ್ಟ ಉದ್ಯೋಗದೊಂದಿಗೆ ತೋಟಗಾರಿಕೆಯನ್ನು ಆಯ್ದುಕೊಳ್ಳಬಹುದು. ವೈಜ್ಞಾನಿಕ, ಸಾವಯವ ಪದ್ಧತಿ ಅಳವಡಿಸಿಕೊಂಡರೆ ಉತ್ತಮ. ಉತ್ಪನ್ನದ ಮೌಲ್ಯವರ್ಧನೆ ಮಾಡುವುದರಿಂದ ಲಾಭ ಹೆಚ್ಚು. ಇತರ ಕ್ಷೇತ್ರಗಳಂತೆ ಈ ರಂಗದಲ್ಲೂ ನಿರಂತರ ಅಧ್ಯಯನ ಅಗತ್ಯ. ಉದ್ಯಮ ಬೆಳವಣಿಗೆಗೆ ಅನುಸರಿಸುವ ತಂತ್ರಗಳಂತೆ ಕೃಷಿಯನ್ನು ಒಂದು ಉದ್ಯಮವಾಗಿ ಪರಿಗಣಿಸಿ ಮಾರುಕಟ್ಟೆ ತಂತ್ರ ರೂಪಿಸಬೇಕು. ಸ್ಥಳೀಯ ಮಾರುಕಟ್ಟೆ, ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಮಾರುಕಟ್ಟೆಗಳ ಜ್ಞಾನ ತಿಳಿದುಕೊಂಡಲ್ಲಿ ಸುಲಭವಾಗಿ ಉತ್ಪನ್ನ ಮಾರಾಟ ಮಾಡಬಹುದು. ಸರ್ಕಾರ ಸಬ್ಸಿಡಿ ಆಧಾರಿತ ಯೋಜನೆ ನೀಡುವ ಬದಲು, ಮಾರುಕಟ್ಟೆ ಪ್ರೋತ್ಸಾಹ ಯೋಜನೆ ರೂಪಿಸಿದರೆ ಅನುಕೂಲ.

01-01-2022 Vv Pg 08

For more information visit
University Library Website
Web - uasbagrilibindia.org
E-mail- librarian@uasbangalore.edu.in